# ಇಲ್ಲೇ ವೈಕುಂಠ ಕಾಣಿರೊ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Note:** The lyrics given here fully matches with the singer.

ರಾಗ: ಶಂಕರಾಭರಣ ತಾಳ: ಆದಿ

ಇಲ್ಲೇ ವೈಕುಂಠ ಕಾಣಿರೊ -ಸಿರಿ
ವಲ್ಲಭನಂಘ್ರಿಯ ನೆರೆನಂಬಿದವರಿಗೆ ॥ ಪ ॥

ನುಡಿಯೆರಡಾಗದೆ ಕಡು ಕೋಪ ಮಾಡದೆ
ಬಡತನ ಬಂದರು ಲೆಕ್ಕಿಸದೆ, ಬೆಡಗು
ಹೆಣ್ಣುಗಳ ಕಡೆಗಣ್ಣೊಳು ನೋಡದೆ
ಧೃಡ ಚಿತ್ತದಲಿ ಶ್ರೀ ಹರಿಯ ನಂಬಿದವರಿಗೆ ॥ 1 ॥

ಪಕ್ಷಪಾತವಿಲ್ಲದೆ ಅನ್ನದಾನಂಗಳನು -
ಪೇಕ್ಷೆಯ ಮಾಡದೆ ಗುರುಹಿರಿಯರನು
ಮೋಕ್ಷವ ಬಯಸುತ ಅನ್ಯಾಯವಳಿಯುತ
ಲಕ್ಷ್ಮೀ ನಾರಾಯಣನ ಬಿಡದೆ ಧೇನಿಪರಿಗೆ ॥ 2 ॥

ಪರ ಹಿತವನು ಮಾಡಿ ಕೆರೆ ಬಾವಿಗಳ
ಅರವಟಿಗೆಯ ಸಾಲು ಮರವ ಹಾಕಿ
ಸಿರಿ ಪುರದರಸು ಶ್ರೀ ಪುರಂದರ ವಿಠಲನ
ಸ್ಥಿರ ಚಿತ್ತದಲಿ ಬಿಡದೆ ಸ್ಮರಿಸುತಲಿ ಹರಿಗೆ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಹಾಡಿನಲ್ಲಿ ದಾಸರು ಹರಿಭಕ್ತನ ಶೀಲಗಳನ್ನು ವಿವರಿಸಿ ಅಂಥಾ ಶೀಲವಂತರಿಗೆ ಇಹಲೋಕವೇ ವೈಕುಂಠವಾಗಿ ಪರಿಣಮಿಸುವುದೆಂದು ಹೇಳಿದ್ದಾರೆ.

**ನುಡಿ ಎರಡಾಗು** = ಕೊಟ್ಟ ಮಾತಿಗೆ ತಪ್ಪು, ಸುಳ್ಳಾಡು

**ಪಕ್ಷಪಾತ** = ಭೇದ

**ಅರವಟಿಗೆ** = ನೀರಿಲ್ಲದಲ್ಲಿ ದಾರಿಕಾರರಿಗೆ ನೀರು ಪೂರೈಸುವ ಸ್ಥಳ.

**ಸಾಲು ಮರ** = ನೆರಳಿಗಾಗಿ ಮರ ನೆಡುವುದು

**Classification:** Keerthane
**Ankita:** sri purandara vittala
**Location:** NA
**Category:** Bhakti
**Group Words:** Vishnu, Lakshmi, vaikunta, sittu, badava, hengasu, chitta, Krishna, dana, mukti,
**Pravachana:** NA
**Explanation:** NA